**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.804/2016**

| | | |
|---|---|---|
| ಸಾಕ್ಷಿದಾರರ ಹೆಸರು | : ಪಿ.ಎಲ್ ಪ್ರಹಲ್ಲಾದ್ | ಪ್ರಾಸಾ-5 |
| ತಂದೆಯ ಹೆಸರು | : ಲೇಟ್ ಲಚ್ಚಣ್ಣ | ಚಾಸಾ-15 |
| ವಯಸ್ಸು | : 66 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ನಿವೃತ್ತ ವಲಯ ಅರಣ್ಯಾಧಿಕಾರಿ | ದಿನಾಂಕಃ 25.07.2025. |
| ವಾಸಸ್ಥಳ | : ಬೆಂಗಳೂರು | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ಜೂನ್ 2012 ರಿಂದ ಸೆಪ್ಟಂಬರ್ 2016 ರವರೆಗೆ ಕಳಸದ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.23.05.2015 ರಂದು ಕೂವೆ ಶಾಖೆಯ ಉಪ-ವಲಯ ಅರಣ್ಯಾಧಿಕಾರಿಯಾದ ಚಾಸಾ-1 ರವರು ಕಛೇರಿಗೆ ಹಾಜರಾಗಿ, ಹಾದಿಹೋಣಿ ಗ್ರಾಮದ ಸ.ನಂ.22 ಮತ್ತು 23 ರ ಒತ್ತುವರಿ ಪ್ರದೇಶದಲ್ಲಿ ಆರೋಪಿತರುಗಳು, ಸದರ ಒತ್ತುವರಿ ಪ್ರದೇಶದಲ್ಲಿ ಕಾಡು ಜಾತಿಯ ಮರಗಳ ತೊಗಡೆಯನ್ನು ತೆಗೆದು ಮರಗಳನ್ನು ಸಾಯಿಸಿರುತ್ತಾರೆ, ಅವುಗಳನ್ನು ನಾನು ಎಣಿಕೆ ಮಾಡಿ, ಅಳತೆ ಮಾಡಿ ಮತ್ತು ಕೆಂಪು ಬಣ್ಣದಿಂದ ಅವುಗಳನ್ನು ಗುರುತಿಸಿ, ಅವುಗಳ ಫೋಟೋಗಳನ್ನು ತೆಗೆದು ನನ್ನ ಅವಗಹನೆಗೆ ಒಪ್ಪಿಸಿರುತ್ತೇನೆ ಎಂದು ನನಗೆ ವರದಿಯನ್ನು ನೀಡಿರುತ್ತಾರೆ. ಆ ಪ್ರಕಾರ ನಾನು ದಿ.23.05.2015 ರಂದು ಆರೋಪಿತರುಗಳ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಲು ಚಾಸಾ-1 ರವರಿಗೆ ಆದೇಶ ನೀಡಿರುತ್ತೇನೆ.

ಅದರಂತೆ ದಿ.25.05.2015 ರಂದು ಮಾನ್ಯ ನ್ಯಾಯಾಲಯದಿಂದ ಅನುಮತಿಯನ್ನು ಪಡೆದು, ಅವರು ಎಫ್.ಒ.ಸಿ.5/2015-16 ರಡಿಯಲ್ಲಿ ಆರೋಪಿತರುಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ, ಪ್ರ.ವ.ವ, ಮಹಜರ್ ನ ವರದಿ, ಅಮಾನತು ವರದಿಯನ್ನು ನನಗೆ ನೀಡಿರುತ್ತಾರೆ.

ಈ ಹಿಂದೆ ಆರೋಪಿತರುಗಳು ಹಾದಿಹೋಣಿ ಗ್ರಾಮದ ಸ.ನಂ.22 ಮತ್ತು 23 ರಲ್ಲಿ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ ಕುರಿತು, ಅವರ ವಿರುದ್ಧ ಎಫ್.ಒ.ಸಿ.ನಂ.73/1999-2000 ನೇ ಸಾಲಿನಲ್ಲಿ ಒಂದು ಪ್ರಕರಣವು ದಾಖಲಾಗಿರುತ್ತದೆ. ಆ ಪ್ರಕಾರ ಕೊಪ್ಪ ತಾಲ್ಲೂಕಿನ ಕೊಪ್ಪದ ಉಪ-ವಲಯ ಅರಣ್ಯಾಧಿಕಾರಿಗಳ ಮೋಜಣಿ ಘಟಕಕ್ಕೆ ಸದರಿ ಒತ್ತುವರಿ ಜಮೀನು ಮತ್ತು ಹಿಡುವಳಿ ಜಮೀನಿನ ಕುರಿತು ಪ್ರತ್ಯೇಕವಾಗಿ ಮೋಜಣಿ ಮಾಡಿ ವರದಿಯನ್ನು ನೀಡುವಂತೆ ಮನವಿಯನ್ನು ಮಾಡಿರುತ್ತೇನೆ. ಅದರ ಬಾಬ್ತು ಕೊಪ್ಪದ ಉಪ-ವಲಯ ಅರಣ್ಯಾಧಿಕಾರಿಗಳ ಮೋಜಣಿ ಘಟಕದವರು ಸ್ಥಳಕ್ಕೆ ಭೇಟಿ ನೀಢಿ ಮೋಜಣಿ ಕ್ರಮ ಜರುಗಿಸಿ ವರದಿಯನ್ನು ನೀಡಿರುತ್ತಾರೆ.

ನಂತರ ದಿ.30.05.2015 ರಂದು ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ನೀಡಿದ ವರದಿಯ ಬಾಬ್ತು ಸ್ಥಳ ಪರಿಶೀಲಿಸಲಾಗಿ ತೊಗಟೆ ತೆಗೆದು ಸಾಯಿಸಿದ ಮರಗಳು ಒತ್ತುವರಿಯಾಗಿದ್ದ ಅರಣ್ಯ ಪ್ರದೇಶದ ಒಳಗೆ ಇರುವುದು ತಿಳಿದುಬಂದಿರುತ್ತದೆ. ನಂತರ ಸ.ನಂ.22

ಮತ್ತು 23 ರ ಜಮೀನಿನ ಪಹಣಿಯನ್ನು ಪರಿಶೀಲಿಸಲಾಗಿ, ಸ.ನಂ.23 ರಲ್ಲಿ 300 ಎಕರೆ ಅರಣ್ಯ ಪ್ರದೇಶ ಮತ್ತು ಸ.ನಂ.22 ರಲ್ಲಿ 200 ಎಕರೆ ಅರಣ್ಯ ಪ್ರದೇಶ ಇರುವುದು ಕಂಡುಬಂದಿರುತ್ತದೆ. ಅದರ ಬಾಬ್ತು 2022 ನೇ ಇಸವಿಯಲ್ಲಿ ಮಾನ್ಯ ಜಿಲ್ಲಾಧಿಕಾರಿ, ಚಿಕ್ಕಮಗಳೂರು ರವರು ಹಾದಿಹೋಣಿಯ ಸ.ನಂ.22 ಮತ್ತು 23 ರನ್ನು ಒಳಗೊಂಡಂತೆ ಇತರೆ ಸ.ನಂ. ಗಳ ಜಮೀನು ಅರಣ್ಯ ಪ್ರದೇಶಕ್ಕೆ ಮೀಸಲಿಡಲಾಗಿರುವ ದಟ್ಟ ಅರಣ್ಯ ಪ್ರದೇಶ ಎಂದು ಘೋಶಿಸಿರುತ್ತಾರೆ.

ದಿ.01.07.2015 ರಂದು ಆರೋಪಿತರಿಗೆ ಕಛೇರಿಗೆ ಹಾಜರಾಗುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಆದೆರ ಆರೋಪಿತರುಗಳು ಸದರಿ ನೋಟೀಸಿನ ಬಾಬ್ತು ಕಛೇರಿಗೆ ಹಾಜರಾಗಿರುವುದಿಲ್ಲ. ಆದ ಕಾರಣ ಆರೋಪಿತರುಗಳ ಕೃತ್ಯ ಕಾನೂನು ಬಾಹಿರವಾದ ಕಾರಣ ನಾನು ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ರವರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ವಿಚಾರಣಾ ವರದಿಯ ಬಾಬ್ತು ಕೊಪ್ಪದ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ಚಾಸಾ-13 ಮತ್ತು 14 ರವರಿಗೆ ಸ್ಥಳಕ್ಕೆ ಭೇಟಿ ನೀಡುವಂತೆ ಪತ್ರದ ಮುಖೇನ ಮನವಿಯನ್ನು ಮಾಡಿರುತ್ತಾರೆ.

ಆ ಪ್ರಕಾರ ದಿ.19.01.2016 ರಿಂದ ದಿ.21.01.2016 ರವರೆಗೆ ಚಾಸಾ-13 ಮತ್ತು 14 ರವರು ಸ್ಥಳ ಪರಿಶೀಲಿಸಿ ತೊಗಟೆ ತೆಗೆದ ಮರಗಳು ಯಾವ ರೀತಿ ಸತ್ತು ಹೋಗಿರುತ್ತವೆ ಎಂಬುದರ ಕುರಿತು ವರದಿಯನ್ನು ತಯಾರಿಸಿ ಮತ್ತು ಕಾರಣಗಳನ್ನು ನಮೂದಿಸಿ ಕೊಪ್ಪದ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯ ಬಾಬ್ತು ಕೊಪ್ಪದ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ನನಗೆ ಆರೋಪಿತರುಗಳ ವಿರುದ್ಧ ದೋ.ಪ.ಯನ್ನು ಸಲ್ಲಿಸಲು ಆದೇಶವನ್ನು ನೀಡಿರುತ್ತಾರೆ. ಆ ಪ್ರಕಾರ ನಾನು ನ್ಯಾಯಾಲಯಕ್ಕೆ ದೋ.ಪ.ಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-30 ರ ಒತ್ತುವರಿ ನಕಾಶೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-30(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-31 ರ ಎಲ್ಲೆ ಮರಗಳ ಪಟ್ಟಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-31(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-33 ರ ಒತ್ತುವರಿ ಕುರಿತು ನೀಡಿರುವ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-33(ಡಿ) ಎಂದು ಗುರುತಿಸಲಾಯಿತು. ನಿಪಿ-5 ರಿಂದ ನಿಪಿ-12 ಮತ್ತು ನಿಪಿ-17 ರಿಂದ 20 ಮರಗಳ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 5 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ರಿಂದ 3 ನೇ ಆರೋಪಿತರುಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಡಿ. ವಕೀಲರಿಂದಃ</u>**

ಹಾದುಹೋಣಿ ಗ್ರಾಮದ ಸ.ನಂ.22 ಮತ್ತು 23 ರ ಒಟ್ಟು ವಿಸ್ತೀರ್ಣ ನನಗೆ ತಿಳಿದಿರುವುದಿಲ್ಲ. ಸದರಿ ಜಮೀನು ಈ ಹಿಂದೆ ಕಂದಾಯ ಇಲಾಖೆಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ ಜಮೀನು 2002 ನೇ ಸಾಲಿನಲ್ಲಿ ಜಿಲ್ಲಾಧಿಕಾರಿಯವರ ಆದೇಶದ ಮೇರೆಗೆ ಅರಣ್ಯ

ಪ್ರದೇಶಕ್ಕಾಗಿ ಮೀಸಲು ಇಡಲಾಗಿರುತ್ತದೆ. ಸಾಮಾನ್ಯವಾಗಿ ಒಂದು ಪ್ರದೇಶವು ಅರಣ್ಯ ಪ್ರದೇಶಕ್ಕಾಗಿ ಮೀಸಲಿಡಕಬೇಕಾದರೆ ಕಲಂ 4 ರಿಂದ 7 ರ Forest Act ನ ಪ್ರಕಾರ ಅಧಿಸೂಚನೆಯನ್ನು ಹೊರಡಿಸಬೇಕು ಎಂದರೆ ಸಾಕ್ಷಿಯು ಸದರಿ ನಿಯಮವು ರಿಸರ್ವ್ ಪಾರೆಸ್ಟ್ ಮತ್ತು ಸ್ಟೇಟ್ ಪಾರೆಸ್ಟ್ ಗಳಿಗೆ ಮಾತ್ರ ಅನ್ವಯವಾಗುತ್ತದೆ ಆದರೆ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಜಮೀನು ಜಾಗವು Deemed Forest ಆದ ಕಾರಣ ಸದರಿ ನಿಯಮವು ಇದಕ್ಕೆ ಅನ್ವಯಿಸುವುದಿಲ್ಲ. ಸಾಕ್ಷಿಯು ಮುಂದುವರೆದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸದರಿ ಮರಗಳು ನೈಸರ್ಗಿಕ ಅರಣ್ಯ ಮರಗಳ ಗುಣಲಕ್ಷಣಗಳನ್ನು ಹೊಂದಿರುತ್ತವೆ ಎಂದು ನುಡಿಯುತ್ತಾರೆ. ಸದರಿ Deemed Forest ಎಂಬ ಪದವು ಪಾರೆಸ್ಟ್ ಕಾಯ್ದೆ ಯಡಿಯಲಿ ವಿವರಿಸಲಾಗಿರುವುದಿಲ್ಲ ಆದರೆ Goda Verman and others v/s State of India ಪ್ರಕರಣದ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ Deemed Forest ಎಂಬ ಪದವು ಬಂದಿರುತ್ತದೆ.

ಇತ್ತೀಚೆಗೆ ಮಾನ್ಯ ಉಚ್ಚ ನ್ಯಾಯಾಲಯದವರು Deemed Forest ಎಂಬ ಪದವು ಇರುವುದಿಲ್ಲ ಎಂಬ ತೀರ್ಪನ್ನು ನೀಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 2002 ನೇ ಸಾಲಿನ ಜಿಲ್ಲಾಧಿಕಾರಿಯವರ ಆದೇಶವು ಚಿಕ್ಕಮಗಳೂರು ಜಿಲ್ಲೆಗೆ ಅನ್ವಯವಾಗುತ್ತದೆ ಸದರಿ ಆದೇಶದ ಬಾಬ್ತು ನಾನು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. 2001 ಮತ್ತು 2002 ನೇ ಸಾಲಿನ ಎಫ್.ಆರ್.1 ಕೊಪ್ಪ ಸದರಿ ದಾಖಲಾತಿಯ ಪ್ರಕಾರ ಜಿಲ್ಲಾಧಿಕಾರಿಯವರು ಹೊರಡಿಸಿರುವ ಆದೇಶವು ಕೇವಲ ಕೊಪ್ಪ ತಾಲ್ಲೂಕಿಗೆ ಮೀಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಿಕ್ಕಮಗಳೂರಿನ ಇತರ ತಲ್ಲೂಕುಗಳಿಗೂ ಸದರಿ ಆದೇಶವು ಅನ್ವಯಿಸುತ್ತದೆ ಎಂದು ನಮೂದಿಸಲಾಗಿರುತ್ತದೆ. ಸದರಿ ಆದೇಶದ ರೀತಿಯೇ ಮೂಡಿಗೆರೆ ತಾಲ್ಲೂಕಿಗೂ ಸಂಬಂಧಿಸಿದಂತೆ ಪ್ರತ್ಯೇಕ ಆದೇಶವು ಮಾಡಿರುತ್ತಾರೆ. ಸದರಿ ಪ್ರಕಾರ ಮೂಡಿಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರು ಯಾವುದೇ ಆದೇಶ ಹೊರಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಕುರಿತಂತೆ ನಾನು ಮೋಜಣಿಯನ್ನು ಮಾಡಿಸಿರುತ್ತೇನೆ ಆದರೆ ಸದರಿ ದಿನಾಂಕ ನನಗೆ ನೆನಪಿರುವುದಿಲ್ಲ. ಅದರ ಬಾಬ್ತು ನಾನು ನ್ಯಾಯಾಲಯಕ್ಕೆ ನಕ್ಷೆಯನ್ನು ನಿಪಿ-30 ರಂತೆ ಹಾಜರುಪಡಿಸಿರುತ್ತೇನೆ.

ನಿಪಿ-30 ನ್ನು ಚಾಸಾ-1 ರವರು ದೂರನ್ನು ದಾಖಲಿಸಿದ ನಂತರ ತಯಾರಿಸಲಾಗಿರುತ್ತದೆ. ಚಾಸಾ-1 ರವರು ವರದಿ ನೀಡಿದ ಮೇರೆಗೆ ಒತ್ತುವರಿ ಜಮೀನಿನ ಮೋಜಣಿಯನ್ನು ಒಂದು ಬಾರಿ ಜರುಗಿಸಲಾಗಿರುತ್ತದೆ. ಸದರಿ ಮೋಜಣಿಯ ಪೂರ್ವದಲ್ಲಿ ಪ್ರಸ್ತುತ ಪ್ರಕರಣದ ಆರೋಪಿತರುಗಳಿಗೆ ಬರಳವಣಿಗೆಯಲ್ಲಿ ಯಾವುದೇ ರೀತಿಯ ತಿಳುವಳಿಕೆ ಪತ್ರವನ್ನು ನೀಡಿರುವುದಿಲ್ಲ. ಸದರಿ ಸೂಚನಾವಳಿಯನ್ನು ಮೋಜಣಿಯ ಪೂರ್ವದಲ್ಲಿ ಆರೋಪಿತರುಗಳಿಗೆ ನೀಡಲು ಯಾವುದೇ ತೊಂದರೆ ಇರಲಿಲ್ಲ. ಚಾಸಾ-1 ರವರು ನೀಡಿದ ವರದಿಯ ನಂತರದಲ್ಲಿ ನಾನು ಒತ್ತುವರಿ ಜಮೀನಿನ ಮೋಜಣಿ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ಸ.ನಂ.23 ಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ದಾಖಲಿಸುವ 5 ವರ್ಷಗಳ ಹಿಂದೆಯೇ ಮರದ ತೊಗಟೆಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ಮುಂದುವರೆದು ಒಂದೇ ಬಾರಿ

ಮರವನ್ನು ಕಡಿದಲ್ಲಿ ಅಪರಾಧವಾಗುತ್ತದೆ ಎಂದು ತಿಳಿದು ಮರದ ತೊಗಟೆಯನ್ನು ತೆಗೆಯಲಾಗಿರುತ್ತದೆ ಆದ್ದರಿಂದ ಮರಗಳು ನಿಧಾನವಾಗಿ ಸಾಯುತ್ತವೆ, ಆದ ಕಾರಣ ಅಪರಾಧವು ನೇರವಾಗಿ ಕಂಡುಬರುವುದಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಮರದ ತೊಗಟೆಯನ್ನು ತೆಗೆದಲ್ಲಿ ನಿಧಾನವಾಗಿ ಮರವು ಸಾಯಲು ಆರಂಭಿಸುತ್ತದೆ. ಸಾಮಾನ್ಯವಾಗಿ ಮರದ ತೊಗಟೆ ತೆಗೆದಿದ್ದಲ್ಲಿ ಅದನ್ನು ಹತ್ತಿರದಿಂದ ಪರೀಕ್ಷಿಸಿದರೆ ತಿಳಿದು ಬರುತ್ತದೆ. ನಮ್ಮ ಇಲಾಖೆಯಲ್ಲಿ ಗಸ್ತು ಕಾರ್ಯ ನಿರ್ವಹಿಸಲು ಅಧಿಕಾರಿಗಳು ನೇಮಕಗೊಂಡಿರುತ್ತಾರೆ ಎಂದರೆ ಸರಿ. ಈ ಪ್ರಕರಣವನ್ನು ನೊಂದಾಯಿಸುವ ಪೂರ್ವದಲ್ಲಿ ಸದರಿ ಅಧಿಕಾರಿಗಳಿಂದ ಮರದ ತೊಗಟೆಯನ್ನು ತೆಗೆದಿರುವ ಬಾಬ್ತು ಯಾವುದೇ ಪಿರ್ಯಾದಿಯನ್ನು ನೀಡಲಾಗಿರುವುದಿಲ್ಲ. ಘಟನೆ ನಡೆದ ಪ್ರದೇಶಕ್ಕೂ ಆರೋಪಿತರುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹಾದುಹೋಣಿಯ ಸ.ನಂ.22 ಮತ್ತು 23 ರಲ್ಲಿ ಯಾವುದೇ ಅರಣ್ಯ ಪ್ರದೇಶ ಮೀಸಲಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರುಗಳ ವಿರುದ್ಧ ಸುಳ್ಳು ದೋ.ಪ.ಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.